ಕರ್ನಾಟಕ ಸರ್ಕಾರ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

# ಅನೈರ್ಮಲ್ಯತೆ ಯಿಂದ ನೈರ್ಮಲ್ಯತೆಯಡೆಗೆ ಹೆಜ್ಜೆ ಹಾಕಿ ಇತಿಹಾಸ ಸೃಷ್ಟಿಸಿದ ಅಮೃತಾಪುರ ಗ್ರಾಮ ಪಂಚಾಯಿತಿ




ಈ ದೇಶದ ಪ್ರತಿಯೊಬ್ಬ ವ್ಯಕ್ತಿಯೂ ಸ್ವಚ್ಛತಾ ಕಾರ್ಯದಲ್ಲಿ ಕೈ ಜೋಡಿಸಿ ತಮ್ಮ ಜವಾಬ್ದಾರಿ ನಿರ್ವಹಿಸಿದಾಗ ಮಾತ್ರ ಸ್ವಚ್ಛ ಭಾರತ ನಿರ್ಮಾಣದ ಕನಸು ನನಸಾಗುವುದು. ಸ್ವಚ್ಛತೆಯ ಕೊರತೆ, ತಾಜ್ಯ ನಿರ್ವಹಣೆಯಲ್ಲಿನ ಬೇಜವಾಬ್ದಾರಿತನ, ಸ್ವಚ್ಛತೆಯ ಮಹತ್ವದ ಕುರಿತು ಸರಿಯಾದ ಅರಿವು ಇಲ್ಲದೆ ಇರುವುದು ಪರಿಸರ ಮಾಲಿನ್ಯಕ್ಕೆ ಎಡೆಮಾಡಿಕೊಡುತ್ತದೆ. ಈ ಎಲ್ಲಾ ತಡೆಗೋಡೆಗಳನ್ನು ದಾಟಿ, ತ್ಯಾಜ್ಯ ವಿಲೇವಾರಿ ವಿಚಾರದಲ್ಲಿ ಸರಿಯಾದ ಕ್ರಮವನ್ನು ಪಾಲಿಸುವ ಮೂಲಕ ಚಿಕ್ಕಮಗಳೂರು ಜಿಲ್ಲೆ, ತರೀಕೆರೆ ತಾಲ್ಲೂಕಿನ ಅಮೃತಾಪುರ ಗ್ರಾ.ಪಂ ಇಂದು ಸ್ವಚ್ಛತೆಗೆ ಮಾದರಿಯಾಗಿದೆ.

ಈ ಮೊದಲು ಸ್ವಚ್ಛತೆಯ ಬಗ್ಗೆ ಹೆಚ್ಚಿನ ಅರಿವಿಲ್ಲದೆ ಗ್ರಾಮಸ್ಥರು ತ್ಯಾಜ್ಯವನ್ನು ಎಲ್ಲೆಂದರಲ್ಲಿ ಎಸೆಯುತ್ತಿದ್ದರು. ಹಸಿ ಕಸ, ಒಣ ಕಸವನ್ನು ಬೇರ್ಪಡಿಸದೆ ರಸ್ತೆ ಬದಿಯಲ್ಲೇ ಹಾಕುತ್ತಿದ್ದರು. ಜನರ ಈ ವರ್ತನೆ ಪಂಚಾಯಿತಿ ಅಧಿಕಾರಿಗಳಿಗೆ ತಲೆನೋವಾಗಿತ್ತು. ಕಸ ಸಂಗ್ರಹಣೆ ಮಾಡಲು ಸ್ವಚ್ಛವಾಹಿನಿ ನಿಯಮಿತವಾಗಿ ಬಂದರು ಸಹ ಗ್ರಾಮಸ್ಥರು ಕಸವನ್ನು ಸ್ವಚ್ಛವಾಹಿನಿಗೆ ನೀಡುತ್ತಿರಲಿಲ್ಲ. ಈ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಹಾಗೂ ತ್ಯಾಜ್ಯದ ಸಮರ್ಪಕ ನಿರ್ವಹಣೆ ಮಾಡುವ ಸಲುವಾಗಿ ಪಂಚಾಯಿತಿ ಅಧಿಕಾರಿಗಳು ಪ್ರಮುಖ ನಿರ್ಧಾರಗಳನ್ನು ಕೈಗೊಂಡರು.

## ಸ್ವಚ್ಛ ಅಮೃತಾಪುರ ನಿರ್ಮಾಣಕ್ಕೆ ಕೈಗೊಂಡ ಪ್ರಮುಖ ನಿರ್ಧಾರಗಳು:

ಅಮೃತಾಪುರ ಗ್ರಾ.ಪಂ ವ್ಯಾಪ್ತಿಯಲ್ಲಿ ಸ್ವಚ್ಛತೆ ಕಾಪಾಡುವ ನಿಟ್ಟಿನಲ್ಲಿ ಪ್ರಮುಖವಾಗಿ ಸ್ವಚ್ಛ ಸಂಕೀರ್ಣ ಘಟಕವನ್ನು ನಿರ್ಮಾಣ ಮಾಡಲಾಯಿತು. ಇದು ಜಿಲ್ಲೆಯಲ್ಲಿ ನಿರ್ಮಾಣಗೊಂಡ ಮೊದಲ ಸ್ವಚ್ಛ ಸಂಕೀರ್ಣ ಘಟಕ ಎಂಬ ಕೀರ್ತಿಗೂ ಪಾತ್ರವಾಗಿದೆ. ನಂತರ ಇಲ್ಲಿ ಕೆಲಸ ನಿರ್ವಹಿಸುವ ಸಿಬ್ಬಂದಿಗಳು, ಸ್ವಚ್ಛಾಗ್ರಹಿಗಳು, ಪಂಚಾಯಿತಿ ಅಧಿಕಾರಿಗಳು ನಿರಂತರವಾಗಿ ಗ್ರಾಮಸ್ಥರಿಗೆ ಸ್ವಚ್ಛತೆಯ ಅರಿವು ಮೂಡಿಸಲು ಸ್ವಚ್ಛತಾ ಜಾಗೃತಿ ಕಾರ್ಯಕ್ರಮಗಳನ್ನು ಕೂಡ ಹಮ್ಮಿಕೊಂಡರು.

ತ್ಯಾಜ್ಯದ ಅಸಮರ್ಪಕ ನಿರ್ವಹಣೆಯಿಂದ ಎದುರಾಗುವ ಸಮಸ್ಯೆಗಳು, ದುಷ್ಪರಿಣಾಮಗಳು ಹಾಗೂ ಹರಡಬಹುದಾದ ಸಾಂಕ್ರಾಮಿಕ ರೋಗಗಳ ಕುರಿತು ಮಾಹಿತಿ ನೀಡಿದರು. ಅನೈರ್ಮಲ್ಯತೆಯಿಂದ ಎದುರಾಗುವ ಸಮಸ್ಯೆಗಳನ್ನು ಮನವರಿಕೆ ಮಾಡಿಕೊಂಡ ಗ್ರಾಮಸ್ಥರು ತ್ಯಾಜ್ಯವನ್ನು ಮನೆ ಹಂತದಲ್ಲಿ ಹಸಿ ಕಸ- ಒಣ ಕಸವನ್ನಾಗಿ ವಿಂಗಡಣೆ ಮಾಡಿ ಸ್ವಚ್ಛ ವಾಹಿನಿಗೆ ತ್ಯಾಜ್ಯವನ್ನು ನೀಡುತ್ತಿದ್ದಾರೆ.

## ಅನುಷ್ಠಾನದ ಸಂದರ್ಭದಲ್ಲಿ ಎದುರಿಸಿದ ಸವಾಲುಗಳು:

ತ್ಯಾಜ್ಯ ಸಂಗ್ರಹಣೆ ಅನುಷ್ಠಾನದ ಪ್ರಾರಂಭದ ದಿನಗಳಲ್ಲಿ ಸಾರ್ವಜನಿಕರು ಆಕ್ಷೇಪಣೆ ಮತ್ತು ವಿರೋಧ ವ್ಯಕ್ತಪಡಿಸುತ್ತಿದ್ದರು. ಕಸ ಸಂಗ್ರಹಣೆ ಮಾಡಲು ಒಕ್ಕೂಟದ ಮಹಿಳೆಯರು ಮನೆಗಳಿಗೆ ತೆರಳಿದಾಗ ಕಸ ನೀಡದೇ ಇರುವುದು, ಇನ್ನೂ ಕೆಲವರು ತ್ಯಾಜ್ಯವನ್ನು ಬೇರ್ಪಡಿಸದೆ ನೀಡುವುದು ಮಾಡುತ್ತಿದ್ದರು.

## ಸವಾಲುಗಳನ್ನು ಎದುರಿಸಲು ತೆಗೆದುಕೊಂಡ ಕ್ರಮ/ವಿಧಾನ:-

ಈ ಯೋಜನೆಯ ಅನುಷ್ಠಾನದ ಮೊದಲು ಅನೇಕ ಸವಾಲುಗಳನ್ನು ಎದುರಿಸಿದ ನಂತರ, ಸ್ವಚ್ಛತೆ ಕುರಿತು ಅನೇಕ ಐ.ಇ.ಸಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು. ಗ್ರಾಮದಲ್ಲಿ ಎಲ್ಲಾ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳನ್ನು ಒಟ್ಟುಗೂಡಿಸಿ ಈ ಯೋಜನೆಯ ಉದ್ದೇಶದ ಕುರಿತು ಜನರಿಗೆ ಮನವರಿಕೆ ಮಾಡಿದರು. ಶಾಲಾ ಮಕ್ಕಳಿಗೆ, ಮಹಿಳೆಯರಿಗೆ ಅರಿವು ಮೂಡಿಸಿ ತ್ಯಾಜ್ಯವನ್ನು ಸ್ವಚ್ಛವಾಹಿನಿಗೆ ನೀಡುವಂತೆ ತಿಳಿಸಲಾಯಿತು. ತ್ಯಾಜ್ಯವನ್ನು ರಸ್ತೆ ಬದಿಯಲ್ಲಿ ಹಾಕಿದವರಿಗೆ ದಂಡವನ್ನು ವಿಧಿಸುವುದಾಗಿ ಪ್ರಚಾರ ಪಡಿಸಿದಾಗ ತ್ಯಾಜ್ಯವನ್ನು ಹೊರಗಡೆ ಹಾಕದೇ ಸ್ವಚ್ಛವಾಹಿನಿಗೆ ನೀಡಲು ಪ್ರಾರಂಭಿಸಿದರು. ಇತ್ತೀಚಿನ ದಿನಗಳಲ್ಲಿ ತ್ಯಾಜ್ಯವನ್ನು ಎಲ್ಲಾ ಮನೆಗಳಿಂದ ಸಂಗ್ರಹಿಸಲಾಗುತ್ತಿದ್ದು, ಘನ ತ್ಯಾಜ್ಯ ವಿಲೇವಾರಿ ಘಟಕವು ವ್ಯವಸ್ಥಿತವಾಗಿ ನಿರ್ವಹಣೆಯಾಗುತ್ತಿದೆ.

## ಸ್ವಚ್ಛ ಗ್ರಾಮ ನಿರ್ಮಾಣದ ಜೊತೆಗೆ ಮಹಿಳಾ ಸಬಲೀಕರಣಕ್ಕೆ ಒತ್ತು:

ಅನೈರ್ಮಲ್ಯತೆಯಿಂದ ನೈರ್ಮಲ್ಯತೆಯೆಡೆಗೆ ಸಾಗುವಲ್ಲಿ ಅಮೃತಾಪುರ ಗ್ರಾ.ಪಂ ಸಾಕಷ್ಟು ಸಾಧನೆಗೈದಿದೆ. ಅದರಲ್ಲೂ ವಿಶೇಷವಾಗಿ ಘನ ತ್ಯಾಜ್ಯ ವಿಲೇವಾರಿ ಘಟಕವು ಒಕ್ಕೂಟದ ಮಹಿಳೆಯರಿಂದ ನಿರ್ವಹಣೆಯಾಗುತ್ತಿದೆ. ವಾಹನ ಚಾಲನೆಗೆ ತರಬೇತಿ ಪಡೆದ ಮಹಿಳೆಯರು ಸ್ವಚ್ಛ ವಾಹಿನಿ ಚಲಾಯಿಸುತ್ತ ಗ್ರಾಮಸ್ಥರಿಗೆ ಸ್ವಚ್ಛತೆಯ ಮಹತ್ವದ ಕುರಿತು ಜಾಗೃತಿ ಮೂಡಿಸುತ್ತಿದ್ದಾರೆ. ಈ ಮೂಲಕ ಸ್ವಚ್ಛತೆಯ ಜೊತೆಗೆ ಮಹಿಳಾ ಸಬಲೀಕರಣಕ್ಕೂ ಅಮೃತಾಪುರ ಗ್ರಾ.ಪಂ ಕಾರಣವಾಗಿದೆ.

ಮನೆ-ಮನೆಗೆ ತೆರಳಿ ತ್ಯಾಜ್ಯ ಸಂಗ್ರಹಿಸುವುದರಿಂದ ಗ್ರಾಮದಲ್ಲಿ ಸ್ವಚ್ಛತೆ ಮನೆ ಮಾಡಿದೆ. ನಿಯಮಿತವಾಗಿ ನಡೆಯುತ್ತಿರುವ ಸ್ವಚ್ಛತೆ ಶ್ರಮದಾನದಿಂದ ಗ್ರಾಮ ಸುಸ್ಥಿರ ಅಭಿವೃದ್ಧಿ ಕಂಡಿದೆ.

ಸ್ವಚ್ಛ ಭಾರತ ಒಂದು ಹೆಜ್ಜೆ ಸ್ವಚ್ಛತೆಯ ಕಡೆಗೆ

ಸ್ವಚ್ಛ ಸಂಕೀರ್ಣ

ಸ್ವಚ್ಛಮೇವ ಜಯತೆ

ಜಲೋತ್ಸವ

ಮನೆ ಮನೆಗೆ ಗಂಗೆ ಜಲ ಜೀವನ್ ಮಿಷನ್